ಮುಳುಗುತದೆ. ಹಾವು ಹಿಡಿಯೋದು ಅಂದ್ರೆ ಒಂದು ಗಂಟೇನೋ ಎರಡು ಗಂಟೇನೋ. ಜನರಿಗೆ ಹೆದರಿ ಅದೇನಾದರೂ ಒಂದು ಸಂದಿನಾಗೆ ಸೇರಿಕೊಂಡ್ರೆ ಮುಗಿದೇಹೋಯ್ತು. ಈಗ ಬ್ಯಾಡ್ರೀ. ನಾಳೆ ಮುಂಜಾನೆ ಬರುತೀನಿ. ಅದು ಎಲ್ಲೂ ಹೋಗಲ್ಲ. ಇನ್ನೊಂದು ಸಲ ಸರಿಯಾಗಿ ಹೇಳ್ರೀ ನಿಮ್ಮ ಅಡ್ರಸ್' ಎಂದ.

ಕಾಯಬೇಕು. ಬೇರೆ ದಾರಿ ಇರಲಿಲ್ಲ. ರಂಗ ವಿವರವಾಗಿ ಅಡ್ರಸ್ ಹೇಳಿದ. ಈ ರಾತ್ರಿ ಮನೆಮಂದಿಗೆಲ್ಲ ಒಂದು ಯುಗವಾಗಿ ಕಂಡಿತು. ಮಲಗೋಕೆ ಮುಂಚೆ ಹಾಸಿಗೆ ಸರಿಯಾಗಿ ಝಾಡಿಸಿ ಹಾಸಿಕೊಂಡರು. ಮಲಗುವ ಕೊಠಡಿಗಳನ್ನು ಆಮೂಲಾಗ್ರ ಶೋಧಿಸಿ ಎಲ್ಲೂ ಹಾವು ಇಲ್ಲ ಎಂದು ದೃಢಪಡಿಸಿಕೊಂಡರು. ಅವತ್ತು ರಾತ್ರಿ ಲೈಟ್‌ಗಳು ಆಫ್ ಆಗಲೇ ಇಲ್ಲ.

ಅಂತೂ ಈ ತಳಮಳದಲ್ಲಿ ಬೆಳಗಾಯ್ತು. ಎದ್ದಾಗ ಶಾರದಮ್ಮನ ಕಣ್ಣುಕೆಂಪಾಗಿತ್ತು. ರಾತ್ರಿ ಕಣ್ಣು ಮುಚ್ಚಿರಲಿಲ್ಲ.

ಬೆಳಿಬೆಳಿಗ್ಗೆ ಆರಕ್ಕೆ ಎದ್ದು ಬಾಗಿಲು ಮುಂದೆ ನಿಂತು ರಂಗ ಹಾವಾಡಿಗನಿಗಾಗಿ ಕಾಯತೊಡಗಿದ್ದ. ದೂರದಲ್ಲಿ ಒಬ್ಬರು ಬರೋದು ಕಾಣಿಸಿತು. ರಂಗ ಅತ್ತ ಧಾವಿಸಿದ.

'ನಿನ್ನೆ ಹಾವು ಬಂದಿತ್ತಂತಲ್ಲ ಆ ಮನೆ ಯಾವುದ್ರೀ?' ಎಂದು ಆತ ಕೇಳುತ್ತಲೇ ರಂಗನ ಮುಖ ಇಷ್ಟಗಲ ಆಯ್ತು. 'ಅದೇ ಮನೆ ಬರ್ರೀ ಬರ್ರೀ ಎಂದು ಕರೆದುಕೊಂಡು ಬಂದ.

ಅವನ ಗಡ್ಡ ಬೆಳೆದಿತ್ತು. ಒಂದು ಬಿಳಿ ಅಂಗಿ. ಹೆಗಲಿಗೆ ಒಂದು ದೊಡ್ಡ ಚೀಲ ಇಳಿ ಬಿಟ್ಟುಕೊಂಡಿದ್ದ. ಪಾಯಿಜಾಮ. ಇವನೇನಾಪ್ಪ ಹಾವನ್ನು ಹಿಡೀತಾನೆ ಎಂಬಂತೆ ಸಣಕಲ ದೇಹದ ವ್ಯಕ್ತಿ.

'ಎಲ್ಲಿದೆ ಹಾವು?' ಕಾಂಪೌಂಡ್ ಒಳಗೆ ಕಾಲಿಡುತ್ತಲೇ ಅವನು ಕೇಳಿದ.

'ದಾರೀಲಿ ಹೋಗೋನು ಹಾವು ಅಂತ ಕೂಗಿ ನಮ್ಮ ಮನೆ ಕಡೆ ಕೈ ತೋರಿಸಿದ. ಅದು ಇಲ್ಲಿ ಎಲ್ಲೋ ಹೋಗಿರಬೇಕು.'

'ಎಷ್ಟು ಉದ್ದ ಇತ್ತಂತೆ, ಕರೀದೋ ಹಸಿರೋ, ಯಾವ ಹಾವು?'

ಅದನ್ನು ಯಾರೂ ನೋಡಿರಲಿಲ್ಲ. ಏನೆಂದು ಹೇಳೋದು. ಎಲ್ಲರೂ ಮೌನವಾಗಿ ನಿಂತಿದ್ದರು. ಕೊನೆಯ ಮಾತು ಎನ್ನುವಂತೆ ಅವನು – 'ಅದು ಹಾವಾ ಅಥವಾ' ಎಂದು ಕೇಳುತ್ತಿದ್ದಂತೆ 'ಅಲ್ಲಪ್ಪ, ಹಾವು ಅಲ್ಲದೆ ಇಲೀನ ನೋಡಿ ಹಾವು ಅಂತಾನಾ?' ಎಂದಳು ಶಾರದಮ್ಮ.

'ಹಾವು ಅಂದರೆ ಸಾಮಾನ್ಯ ಅಲ್ಲಮ್ಮ. ಒಂದೊಂದು ಜಾತಿ ಹಾವಿಗೆ ಒಂದೊಂದು ಪಟ್ಟು. ಇಲ್ಲದಿದ್ದರೆ ನಾವೇ ಕಥಂ... ಹಾವು ಹಿಡಿಯೋದು ಅಂದರೆ ಏನಂತಾ ತಿಳಿದೀರಿ? ಮನೆ ಒಳಗೆ ಏನಾದರೂ ಬಂತಾ?' ಎಂದ ಬಂಟವಾಡ ಗಂಭೀರವಾಗಿ.

'ಇಲ್ಲ ಇಲ್ಲ. ನಾವು ಎಲ್ಲ ಕಿಡಕಿ ಬಾಗಿಲು ತಕ್ಷಣ ಮುಚ್ಚಿವಿ. ಸಂದುಗೊಂದಲಲ್ಲಿ ಬಟ್ಟೆ ತುರುಕಿ ಬಂದ್ ಮಾಡೀವಿ. ರೂಮುಗಳಲ್ಲಿ ನೆಲದ ಮೇಲಿದ್ದ ಎಲ್ಲ ಸಾಮಾನು ತೆಗೆದು ಮೇಲೆ ಇಟ್ಟೀವಿ. ಅದು ಮನೆ ಒಳಗೆ ಸೇರಿಕೊಂಡಿಲ್ಲ.'

'ಚಲೋ ಮಾಡೀರಿ' – ಒಂದು ರೀತಿ ತೃಪ್ತಿಯಿಂದ ಹೇಳಿ ಅವನು ತನ್ನ ಹೆಗಲ ಮೇಲಿನ ದಪ್ಪನೆ ಉಬ್ಬಿದ ಚೀಲ ತೆಗೆದು ಒಂದು ಕಡೆ ಇಟ್ಟು ಎಲ್ಲ ಕಡೆ ಅತ್ಯಂತ ಎಚ್ಚರಿಕೆಯಿಂದ ಉಸಿರಾಡದೆ ಹೆಜ್ಜೆ ಇಡುತ್ತಾ ಹುಡುಕತೊಡಗಿದ. ಅವನ ಒಂದೊಂದು ಹೆಜ್ಜೆ ಇಡುವ ರೀತಿ ಎಲ್ಲರೂ ಉಸಿರು ಬಿಗಿ ಹಿಡಿಯುವಂತೆ ಮಾಡಿತ್ತು. ಭಯ ಹಾಗೂ ಕುತೂಹಲದಿಂದ ಎಲ್ಲರೂ ರೆಪ್ಪೆ ಬಡಿಯದೆ ಹಾವು ಹಿಡಿಯುವುದನ್ನು ನೋಡುತ್ತಾ ನಿಂತರು.

ಅವನು ಅತ್ತ ನೋಡಿದ; ಇತ್ತ ನೋಡಿದ. ಕಾಂಪೌಂಡ್ ಸುತ್ತಿದ. ಕಲ್ಲುಗಳ ಕೊರಕಲಿನಲ್ಲಿ ತಡಕಾಡಿದ. ಪೊದೆಗಳಿಗೆ ಒಂದು ಕೋಲಿಂದ ಬಡಿಯುತ್ತ ಅದರಲ್ಲಿರುವ ಹಾವು ಬಂದರೆ ತಕ್ಷಣ ಹಿಡಿಯಬೇಕೆನ್ನುವವನಂತೆ ಮೈ ಬಿಗಿ ಹಿಡಿದು ನಿಂತ. ಊಹೂಂ, ಹಾವ ಸುಳಿವಿಲ್ಲ. ಹಾಗಂತ ಅವನು ಪ್ರಯತ್ನ ಕೈಬಿಡಲಿಲ್ಲ. ಒಂದು ಕಡೆ ಕುಳಿತು ಪುಂಗಿ ಊದತೊಡಗಿದ. ಹಾವಲ್ಲ, ಕೇಳುವವರೇ ತಲೆದೂಗುವಂತೆ.

ಆ ಪುಂಗಿನಾದಕ್ಕೆ ಮರುಳಾಗಿ ಹಾವು ತಲೆದೂಗುತ್ತಾ ಬಂದು ಹಾವಾಡಿಗನ ಕೈಗೆ ಸಿಗುತ್ತದೆ ಎಂಬುದು ಎಲ್ಲರ ನಿರೀಕ್ಷೆ. ಆದರೆ ಹಾವು ಸುಳಿಯಲಿಲ್ಲ. ಸಮಯ ಕಳೆಯುತ್ತಿದ್ದಂತೆ ಮನೆಯವರೆಲ್ಲ ಹೌಹಾರಿ ಹೋದರು. ಅದು ರಾತ್ರಿ ಎಲ್ಲಿಯಾದರೂ ಹೋಯಿತೇ? ಎಂಬ ಆತಂಕ ಆವರಿಸಿತ್ತು. ಅದರೆ ಹಾವಾಡಿಗ ಮಾತ್ರ ಇನ್ನೇನು ಸಿಕ್ಕಿತು ಎನ್ನುವಂತೆ ಹುರುಪಿನಿಂದಲೇ ಇದ್ದ.

ಸ್ವಲ್ಪ ಹೊತ್ತು ಕಳೆದಿರಬೇಕು, ತಕ್ಷಣ ವಿದ್ಯುತ್ ಸಂಚಲನ ಆದಂತೆ ಕಾಂಪೌಂಡ್ ಪಕ್ಕಕ್ಕೆ ಮೆಲ್ಲಗೆ ಹೋಗಿ ಅಲ್ಲಿಯ ಒಂದು ರಂಧ್ರದಲ್ಲಿ ಅಂಗೈಯಿಂದ ತಟ್ಟಿ ಸೈಜುಗಲ್ಲುಗಳನ್ನು ಅಗಲಿಸಿ ಬಗ್ಗಿ ಅಲ್ಲಿ ಕಿವಿಗೊಟ್ಟು ಆಲಿಸಿದ. ಇದ್ದಕ್ಕಿದ್ದಂತೆ ಅವನ ಮುಖದಲ್ಲಿ ಒಂದು ಮಿಂಚು ಮೂಡಿತು. ತನ್ನ ಚೀಲ ತೆಗೆದ ಸಂದು ಇರುವಲ್ಲಿ ಎರಡು ಸೈಜುಗಲ್ಲುಗಳನ್ನು ಸರಿಸಿ ಅದರಿಂದ ಹೂಜಿಯಂತಹ ಬಿದಿರು ಪುಟ್ಟಿ ಹೊರತೆಗೆದು ಇಟ್ಟು ಬಟ್ಟೆ ಹೊದಿಸಿ ಇತ್ತ ಬಂದು – 'ನಮ್ಮ ನಾಗಪ್ಪ ಇಲ್ಲಿ ಹೊಕ್ಕೊಂಡಾನೆ. ಪುಟ್ಟಿ ಒಳಗೆ ಒಂದು ಬೇರು ಇಟ್ಟೇನಿ. ಅದರ ವಾಸನೆ ಅಂದರೆ ಅದಕ್ಕೆ ಮೋಡಿಮಾಡಿದಂಗೆ. ಆ ಕಡೆ ಯಾರೂ ಸುಳಿಬೇಡ್ರೀ. ನೀವು ಒಳಗೆ ಹೋಗಿ. ನಾನೂ ಹೀಗೆ ಹೋಗಿ ಬರುತೀನಿ' ಎಂದು ಹೊರಹೊರಟ. ಅವನ ಉತ್ಸಾಹ ವಿಶ್ವಾಸ ಈಗಾಗಲೇ ಹಾವನ್ನು ಹಿಡಿದುಬಿಟ್ಟಿದ್ದಾನೆ ಎಂಬಂತೆ ಇತ್ತು. ಅವನ ಅದೇಶದಂತೆ ಎಲ್ಲರೂ ಒಳ ನಡೆದರು.



ಆದರೂ ಅವನು ಇಲ್ಲದ ಈ ಸಮಯದಲ್ಲಿ ಹಾವು ಹೊರಬಂದು ಎಲ್ಲಿಯಾದರೂ ಹೋದರೆ? ಹಾವಿನ ದ್ವೇಷ ಹನ್ನೆರಡು ವರುಷ. ಅದನ್ನು ಹಿಡಿಸುವ ಮಸಲತ್ತು ಮಾಡಿದೇವೆ ಎಂದು ನೆನಪಿಟ್ಟುಕೊಂಡು ಕೆಲವು ದಿನ ಬಿಟ್ಟು ಅದು ಬಂದರೆ ಹೇಗೆ? ಎಂಬ ಒಂದು ಚಿಂತೆ ಶಾರದಮ್ಮನ್ನು ಕಾಡಿತ್ತು. ಆದರೆ ಹುಡುಗರು ಮಾತ್ರ ಹಾವು ನೋಡುವ ಕಾತುರದಲ್ಲಿದ್ದರು.

ಆಗ ಇದ್ದಕ್ಕಿದ್ದಂತೆ 'ಹಾ, ಸಿಕ್ತ' ಎಂಬ ಉದ್ಗಾರ ಹೊರಗಿನಿಂದ ಕೇಳಿಸಿತು.

'ಏನು ಅವನು ಬಂದನಾ? ಹಾವು ಸಿಕ್ಕಿತಾ?' ಎಂದು ಕಿಡಕಿಯಿಂದ ನೋಡಿದರೆ ಅವನು ಬಂದು ಆ ಸ್ಥಳದಲ್ಲಿ ಕುಳಿತು ಆ ಪುಟ್ಟಿ ತೆಗೆಯುತ್ತಿದ್ದಾನೆ.

'ಏನು ಹಾವು ಸಿಕ್ಕಿತೇ?' ಎನ್ನುತ್ತಾ ಎಲ್ಲರೂ ಹೊರಬಂದರು. ಹಾವು ಸಿಕ್ಕಿದೆ ಎನ್ನುವುದೇ ಅವರ ಎದೆ ಬಡಿತ ಹದ ಮಾಡಿತ್ತು. ಬಾಡಿದ ಮುಖಗಳು ಅರಳಿದ್ದವು.

'ಬರ್ರೀ ಬರ್ರೀ, ನಮ್ಮ ನಾಗಪ್ಪನ್ನ ನೋಡ ಬರ್ರಿ' ಎಂದು ಹಾವಾಡಿಗ ಕೂಗಿದ.

ಎಲ್ಲರೂ ಕುತೂಹಲ ಅನಂದದಿಂದ ಧಾವಿಸಿ ಹೋಗಿ ನೋಡುತ್ತಾರೆ ಅವನ ಕೈಲಿ ಒಂದು ಪುಟ್ಟಿ ಮಾತ್ರ ಇದೆ. 'ಹಾವು ಎಲ್ಲಿ?' ಎಂಬಂತೆ ಅವರು ನೋಡಿದರು.

'ಇದರೊಳಗೆ ಕುಂತುಕೊಂಡಿದ್ದಾನೆ. ಇರ್ರೀ ತೆಗೀತೀನಿ. ಹೆದರಿಕೋ ಬ್ಯಾಡಿ' ಎಂದು ಆ ಪುಟ್ಟಿ ಒಳಗೆ ಕೈಹಾಕಿದ.

ಅರೆ ಇದೇನು ಅದು ಅವನಿಗೆ ಕಡಿಯುವುದಿಲ್ಲವೇ? ಅಕಸ್ಮಾತ್ ಅದು ಬುಸ್ ಎಂದು ಹೊರಬಂದರೆ? ಅವನು ಹೆದರಿ ಕೈಬಿಟ್ಟರೆ? ನೋಡುತ್ತಿದ್ದಂತೆ ಅವನು ಹಾವನ್ನು ಅದರ ಕುತ್ತಿಗೆ ಹಿಡಿದು ಹೊರತೆಗೆದ. ಏಳೆಂಟು ಅಡಿ ಇತ್ತು. ಅದು ನಾಲಿಗೆಯನ್ನು ಚಾಚುತ್ತ ಭುಸ್ ಎನ್ನುತ್ತಿತ್ತು. ಆ ಭಯಂಕರ ರೂಪವನ್ನು ನೋಡಿ ಎಲ್ಲರೂ ಕಂಪಿಸಿದರು. ಶಾರದಮ್ಮನಂತೂ 'ಅದನ್ನು ಪುಟ್ಟಿ ಒಳಗೆ ದಬ್ಬಿ ಪುಟ್ಟಿ ಬಾಯಿ ಕಟ್ಟಿಬಿಡು' ಅಂತ ಕೂಗಿಕೊಂಡರು.

ಅಂತೂ ಈಗ ಹಾವು ಸಿಕ್ಕಿತ್ತು. ಭಯ ಹೋಗಿತ್ತು. ಪ್ರಕರಣಕ್ಕೆ ತೆರೆಬಿದ್ದಿತ್ತು. ಆದರೆ ಈಗ ಮತ್ತೊಂದು ಸಮಸ್ಯೆ ಉದ್ಭವಿಸಿತ್ತು – ಅವನಿಗೆ ಎಷ್ಟು ಕೊಡಬೇಕು?

ಮೊದಲು ಈ ಹಾವು ಹಿಡಿದರೆ ಸಾಕಪ್ಪ ಎನ್ನುವ ಭಯದಲ್ಲಿದ್ದ ಅವರಿಗೆ ಈಗ ಎಷ್ಟು ಕೇಳುತ್ತಾನೋ ಎಂಬ ಭಯ. ಶಾರದಮ್ಮ ಗಂಡ ಮಕ್ಕಳು ಸೊಸೆಯರೊಂದಿಗೆ ಒಳಹೋಗಿ 'ಎಷ್ಟು ಕೊಡೋದು?' ಎಂದು ಚರ್ಚಿಸತೊಡಗಿದರು. ಒಬ್ಬೊಬ್ಬರು ಒಂದೊಂದು ಹೇಳಿದರು.

